ಕರ್ನಾಟಕ ಪರೀಕ್ಷಾ ಪ್ರಾಧಿಕಾರ
Karnataka Examinations Authority

ದಿನಾಂಕ: 15-09-2023

ಮಾಪ್ ಅಪ್ ಸುತ್ತಿನ ಹೆಚ್ಚುವರಿ ಸೂಚನೆಗಳು

ದಿನಾಂಕ 14-09-2023 ರಂದು ಪ್ರಕಟಿಸಿದ ಸೂಚನೆಗಳ ಹಿನ್ನಲೆಯಲ್ಲಿ;

A. **ಅಭ್ಯರ್ಥಿಗಳು** ವೈದ್ಯಕೀಯ ಸೀಟನ್ನು ಪಡೆದು ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸುತ್ತಿರಬಹುದು.

B. ಅಂತಹ ಅಭ್ಯರ್ಥಿಗಳು ದಿನಾಂಕ 20-09-2023 – ಬೆ. 10.00 ರೊಳಗೆ ತಮ್ಮ ವೈದ್ಯಕೀಯ ಮಾಪ್ ಅಪ್ ಸುತ್ತಿನಲ್ಲಿ ಭಾಗವಹಿಸುವಿಕೆಯನ್ನು ಮತ್ತೊಮ್ಮೆ ಪರಿಶೀಲಿಸಬಹುದು. ಅಂದರೆ ದಾಖಲಿಸುವ options ಗಳನ್ನು ಪೋರ್ಟಲ್ ನಲ್ಲಿ ಮತ್ತೊಮ್ಮೆ ಪರಿಶೀಲಿಸಿ.

C. ಅಂತಹ ಅಭ್ಯರ್ಥಿಗಳು ಹೊಸದಾಗಿ ವೈದ್ಯಕೀಯ ಸೀಟು ಪಡೆದಲ್ಲಿ ಪಾವತಿಸಿದ ಶುಲ್ಕವನ್ನು ಹೊಂದಾಣಿಕೆ ಮಾಡಿಕೊಳ್ಳಲಾಗುವುದು ಮತ್ತು ಅವರುಗಳು ಈ ಮೊದಲು ಪಡೆದಿದ್ದ ಸೀಟು ರದ್ದುಗೊಳ್ಳುತ್ತದೆ ಮತ್ತು ಅಂತಹ ಸೀಟುಗಳನ್ನು ನಂತರದ ಅರ್ಹ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲಾಗುವುದು.

D. ಆದ್ದರಿಂದ ಕಾಲೇಜುಗಳಿಗೆ ಪ್ರವೇಶ ಪಡೆಯಲು ಆಸಕ್ತಿ ಇರುವಂತಹ options ಗಳನ್ನು ಮಾತ್ರ ನಮೂದಿಸಲು ಸೂಚಿಸಿದೆ.

E. ಅಭ್ಯರ್ಥಿಗಳು ಈ ಮೊದಲು ಪಡೆದಿದ್ದ ಸೀಟನ್ನು ಕೊಡಲು ಮನವಿ ಮಾಡುವ ಹಾಗಿಲ್ಲ. ಅಂದರೆ ಹೊಸದಾಗಿ ಸೀಟು ಆಯ್ಕೆಯಾದಲ್ಲಿ ಹಳೆಯ ಸೀಟು ರದ್ದುಗೊಳ್ಳುತ್ತದೆ. ಹೊಸದಾಗಿ ಹಂಚಿಕೆಯಾದ ಸೀಟು ಮತ್ತು ಹಳೆಯ ಸೀಟು ಗಳಲ್ಲಿ ಒಂದನ್ನು ಆಯ್ಕೆ ಮಾಡುವ ಅವಕಾಶ ಇರುವುದಿಲ್ಲ. ಅಭ್ಯರ್ಥಿಯು ಹೊಸದಾಗಿ ಹಂಚಿಕೆಯಾದ ಕಾಲೇಜಿಗೆ ಕಡ್ಡಾಯವಾಗಿ ಪ್ರವೇಶ ಪಡೆಯಬೇಕು ಯಾಕೆಂದರೆ ಅಭ್ಯರ್ಥಿಗಳು ಬಿಡುವ ಹಳೆಯ ಸೀಟನ್ನು ನಂತರದ ಅಭ್ಯರ್ಥಿಗಳಿಗೆ ಮೆರಿಟ್ ಆಧಾರದ ಮೇಲೆ ಹಂಚಿಕೆ ಮಾಡಲಾಗಿರುತ್ತದೆ.

F. ಒಂದು ವೇಳೆ ಹೊಸ ಸೀಟು ಹಂಚಿಕೆಯಾಗದಿದ್ದಲ್ಲಿ ಹಳೆಯ ಸೀಟಿನಲ್ಲಿ ಮುಂದುವರಿಯಬೇಕು ಮತ್ತು ಅಭ್ಯರ್ಥಿಯು ಪಾವತಿಸುವ caution deposit ಅನ್ನು ಹಿಂದಿರುಗಿಸಲಾಗುವುದು.

ಈ ಮೊದಲು ಸೀಟು ಹಂಚಿಕೆಯಾದ ಅಭ್ಯರ್ಥಿಗಳು ಮಾಪ್-ಅಪ್ ಸುತ್ತಿನಲ್ಲಿ ಹೊಸ ಸೀಟು ಪಡೆದಲ್ಲಿ ಹಳೆಯ ಸೀಟನ್ನು ಹಂಚಿಕೆಗೆ ಪರಿಗಣಿಸಲಾಗುವುದು (consequential allotment). ಅಭ್ಯರ್ಥಿಗಳ ಮಾಹಿತಿಗಾಗಿ ಹಂಚಿಕೆಗೆ ಪರಿಗಣಿಸಬಹುದಾದ ಅಂತಹ ಸೀಟುಗಳ ವಿವರಗಳನ್ನು ದಿನಾಂಕ 19-09-2023 – ಸಂ. 6.00 ರ ನಂತರ ಪ್ರಕಟಿಸಲಾಗುವುದು. ಅಂತಹ ಸೀಟುಗಳನ್ನು ಮಾಪ್-ಅಪ್ ಸುತ್ತಿನಲ್ಲಿ ಹಂಚಿಕೆಗೆ ಪರಿಗಣಿಸುವುದರಿಂದ, ಮಾಪ್-ಅಪ್ ಸುತ್ತಿನಲ್ಲಿ ಭಾಗವಹಿಸುತ್ತಿರುವ ಅಭ್ಯರ್ಥಿಗಳು ಅಂತಹ ಸೀಟುಗಳನ್ನು ದಾಖಲಿಸಲು ಸೂಚಿಸಲಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು.

18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 012
18th Cross, Sampige Road, Malleshwaram, Bengaluru - 560 012.
Phone: 080 - 23 564 583, 23 460 460, 23 361 786, Fax: 080 - 23 461 576
e-mail : keauthority-ka@nic.in Website : http://kea.kar.nic.in